ಅಸಲು ದಾವೆ ನಂ.188/2022

ಪಿ.ಡಬ್ಲೂಃ 1– Chandrashekar S/o Hosahalli Mallappa

ದಿನಾಂಕಃ 20/07/2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು 1 ನೇ ಪ್ರತಿವಾದಿ ಪರವಾಗಿ ಶ್ರೀ ಜಿ.ಎಂ.ಸಿ. ವಕೀಲರಿಂದ**

5. ನಿಪಿ.1 ದಾಖಲೆಯನ್ನು ನನ್ನ ಮಗ ಸುರಜ್.ಸಿ ಹೆಸರಿನಲ್ಲಿ ಪಡೆಯಲಾಗಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಅಂತಹ ದಾಖಲೆಯನ್ನು ಪಡೆಯಲು ಎಲ್ಲರ ಆಧಾರ ಕಾರ್ಡಗಳ ಅವಶ್ಯಕತೆ ಇರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ಪಡೆಯುವಾಗ ಸದರಿ ಸುರಜ್.ಸಿ ಮತ್ತು ಪ್ರತಿವಾದಿಯರ ಮಧ್ಯೆ ಅನ್ಯೋನ್ಯತೆ ಇತ್ತು ಎಂದರೆ ನಮ್ಮ ಕುಟುಂಬದಲ್ಲಿ ವಿವಾದ ಪ್ರಾರಂಭವಾಗಿದ್ದು ಅಷ್ಟೊಂದು ಅನ್ಯೋನ್ಯತೆ ಇರಲಿಲ್ಲ ಆದರೆ ನಾವೇಲ್ಲರೂ ಒಟ್ಟಿಗೆ ವಾಸವಿದ್ದೆವು. ಇತ್ತು. ಸದರಿ ದಾಖಲೆಯನ್ನು ಸುರಜ್.ಸಿ ರವರು ಕುಟುಂಬದಲ್ಲಿ ಸಂಘರ್ಷ ಪ್ರಾರಂಭವಾಗಿದ್ದು ಮುಂದೆ ಯಾವುದಾದರು ಉದ್ದೇಶಕ್ಕಾಗಿ ಅದರ ಅವಶ್ಯಕತೆ ಬೀಳಬಹುದು ಎಂದು ತಿಳಿದು ಅದನ್ನು ಪಡೆದುಕೊಂಡಿದ್ದರು. ಈ ದಾವೆ ದಾಖಲಿಸುವಾಗ ನನ್ನ ಮತ್ತು ಪ್ರತಿವಾದಿಯರ ಮಧ್ಯೆ ಯಾವುದೇ ಒಟ್ಟು ಕುಟುಂಬದ ಇರಲಿಲ್ಲ ಮತ್ತು 1981 ರಲ್ಲಿಯೇ ವಿಭಾಗ ಆಗಿ ನಾನು ಪ್ರತಿವಾದಿಯರಿಂದ ಪ್ರತ್ಯೇಕವಾಗಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಹೃದಯ ಕಾಯಿಲೆ ಇರುವುದರಿಂದ ನಾನು ಸ್ವತಃ ನಿಪಿ.1 ಅನ್ನು ಪಡೆದುಕೊಂಡಿಲ್ಲ ಮತ್ತು ನನ್ನ ಮಗನ ಮೂಲಕ ಪಡೆದುಕೊಂಡಿರುತ್ತೇನೆ.

6. ನಿಪಿ.2 ರಿಂದ 5, 8, 12 ಮತ್ತು 17 ಪಹಣಿಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತವೆ ಎಂದರೆ ಸರಿ. ದಾವಾ ಐಟಂ ನಂಬರ 3 ಸ್ವತ್ತನ್ನು ಒಂದನೇ ಪ್ರತಿವಾದಿಯು ಖರೀದಿಸಿರುತ್ತಾರೆ ಎಂದರೆ ಒಟ್ಟು ಕುಟುಂಬದ ಆದಾಯದಿಂದ ತಮ್ಮ ಹೆಸರಿನಲ್ಲಿ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತನು ಖರೀದಿಸಲು ನಾನಾಗಲೀ ಅಥವಾ ಎರಡನೇ ಪ್ರತಿವಾದಿಯಾಗಲೀ ಯಾವುದೆ ಹಣ ಸಂದಾಯ ಮಾಡಿಲ್ಲ ಎಂದರೆ ಒಟ್ಟು ಕುಟುಂಬದ ಹಣವನ್ನು ಸಂದಾಯ ಮಾಡಲಾಗಿರುತ್ತದೆ ಎಂದು ನುಡಿಯತ್ತಾರೆ. ಈ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಸ್ವತ್ತು ಇಂದಿವರೆಗೂ 1 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲು ಇರುತ್ತದೆ ಎಂದರೆ ಸರಿ. ಸದರಿ ಸ್ವತ್ತು 1 ನೇ ಪ್ರತಿವಾದಿಯ ಸಂಪೂರ್ಣ ಹಕ್ಕು ಸ್ವಾಧೀನದಲ್ಲಿ ಇರುತ್ತದೆ ಮತ್ತು ಅದರಲ್ಲಿ ನನಗೆ ಯಾವುದೇ ಹಿಸ್ಸೆ ಇರುವುದಿಲ್ಲ ಎಂದರೆ ಸರಿಯಲ್ಲ.

7. ನಿಪಿ.9 ರ ಪ್ರಕಾರ ದಾವಾ ಐಟಂ ನಂಬರ 7 ಸ್ವತ್ತು 2 ನೇ ಪ್ರತಿವಾದಿಯ ಪ್ರತ್ಯೇಕ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸ್ವತ್ತು 2 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲು

ಇರುತ್ತದ ಎಂದರೆ ಸರಿ. ಅದೇ ರೀತಿ ನಿಪಿ.13, 14 ಮತ್ತು 20 ರ ಸ್ವತ್ತುಗಳು 2 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲು ಇರುತ್ತವೆ ಎಂದರೆ ಸರಿ. ದಾವಾ ಐಟಂ ನಂಬರ 8, 12 ಮತ್ತು 18 ಸ್ವತ್ತಗಳನ್ನು ಎರಡನೇ ಪ್ರತಿವಾದಿಯು ಖರೀದಿಸಿರುತ್ತಾರೆ ಎಂದರೆ ಒಟ್ಟು ಕುಟುಂಬದ ಆದಾಯದಿಂದ ತಮ್ಮ ಹೆಸರಿನಲ್ಲಿ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತಗಳನ್ನು ಖರೀದಿಸಲು ನಾನಾಗಲೀ ಅಥವಾ ಒಂದನೇ ಪ್ರತಿವಾದಿಯಾಗಲೀ ಯಾವುದೆ ಹಣ ಸಂದಾಯ ಮಾಡಿಲ್ಲ ಎಂದರೆ ಒಟ್ಟು ಕುಟುಂಬದ ಹಣವನ್ನು ಸಂದಾಯ ಮಾಡಲಾಗಿರುತ್ತದೆ ಎಂದು ನುಡಿಯತ್ತಾರೆ. ಈ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಸ್ವತ್ತುಗಳು ಇಂದಿವರೆಗೂ 2 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲು ಇರುತ್ತದೆ ಎಂದರೆ ಸರಿ. ಸದರಿ ಸ್ವತ್ತುಗಳು 2 ನೇ ಪ್ರತಿವಾದಿಯ ಸಂಪೂರ್ಣ ಹಕ್ಕು ಸ್ವಾಧೀನದಲ್ಲಿ ಇರುತ್ತದೆ ಮತ್ತು ಅದರಲ್ಲಿ ನನಗೆ ಯಾವುದೇ ಹಿಸ್ಸೆ ಇರುವುದಿಲ್ಲ ಎಂದರೆ ಸರಿಯಲ್ಲ.

8. ದಾವಾ ಐಟಂ ನಂಬರ 17 ಸ್ವತ್ತನ್ನು ನಾನು ಸ್ವಯಾರ್ಜಿತವಾಗಿ ಖರೀದಿಸಿರುತ್ತೇನೆ ಎಂದರೆ ನನ್ನ ವೈಯಕ್ತಿಕ ಆದಾಯದಿಂದ ಖರೀದಿಸಿರುತ್ತೇನೆ ಆದರೆ ಅದನ್ನು ಕುಟುಂಬದ ಸ್ವತ್ತು ಎಂದು ಪರಿಗಣಿಸಿರುತ್ತೇನೆ ಕಾರಣ ಆಗ ನಾನು ಒಟ್ಟು ಕುಟುಂಬದಲ್ಲಿ ಇದ್ದೆ. ಈ ವಿಚಾರವನ್ನು ನಾನು ವಾದ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಸದರಿ ಸ್ವತ್ತನ್ನು ನಾನು ಸ್ವಯಾರ್ಜಿತವಾಗಿ ಖರೀದಿಸಿದ್ದರೂ ಸಹ ಅದು ಒಟ್ಟು ಕುಟುಂಬದ ಸ್ವತ್ತಾಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತು ಕೇವಲ ನನ್ನ ಹಕ್ಕು ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಆದರೆ ಎಲ್ಲರ ಜಂಟಿ ಹಕ್ಕು ಸ್ವಾಧೀನದಲ್ಲಿರುತ್ತದೆ. ಸದರಿ ಸ್ವತ್ತನ್ನು ಖರೀದಿಸುವಾಗ ಯಾವುದೇ ಒಟ್ಟು ಕುಟುಂಬ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಕ್ರಯ ಪತ್ರಗಳ ಆಧಾರದ ಮೇಲೆ ಅವರವರ ಹೆಸರುಗಳಲ್ಲಿ ಮುಂದೂವರೆದಿರುತ್ತವೆ ಎಂದರೆ ಸರಿ ಆದರೆ ಅವು ಒಟ್ಟು ಕುಟುಂಬದ ಸ್ವತ್ತುಗಳಾಗಿರುತ್ತವೆ.

9. ದಾವಾ ಸ್ವತ್ತುಗಳ ಪೈಕಿ ಯಾವ ಯಾವ ಸ್ವತ್ತುಗಳನ್ನು ನಮ್ಮ ತಂದೆ ಸಂಪಾದಿಸಿರುತ್ತಾರೆ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ ಆದರೆ ಕೆಲವು ಸ್ವತ್ತುಗಳು ನಮ್ಮ ಪೂರ್ವಜರಿಂದ ಬಂದಿರುತ್ತವೆ ಮತ್ತು ಉಳಿದ ಸ್ವತ್ತುಗಳನ್ನು ನಮ್ಮ ತಂದೆ ಪಿತ್ರಾರ್ಜಿತ ಸ್ವತ್ತುಗಳ ಆದಾಯದಿಂದ ಖರೀದಿಸಿರುತ್ತಾರೆ. ದಾವಾ ಸ್ವತ್ತುಗಳ ಪೈಕಿ ಯಾವ ಯಾವ ಸ್ವತ್ತುಗಳನ್ನು ನಮ್ಮ ತಂದೆ ಸಂಪಾದಿಸಿರುತ್ತಾರೆ ಎಂದು ನಾನು ವಾದ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ಮುಂದೂವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

**Sd/-**

(ಮುಜಫರ್)

ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,

ತರೀಕೆರೆ .